**ಕರ್ನಾಟಕ ಸರ್ಕಾರ**

**(ತೋಟಗಾರಿಕೆ ಇಲಾಖೆ)**

ಸಂಖ್ಯೆ:ತೋ‍ಇ:ಆ:ಸಿ:ಪಿ3:90:2017-18

ತೋಟಗಾರಿಕೆ ಆಯುಕ್ತರ ಕಛೇರಿ,
ಲಾಲ್ ಬಾಗ್, ಬೆಂಗಳೂರು-04.
ದಿನಾಂಕ: 11-09-2017

**"ಕಛೇರಿ ಆದೇಶ"**

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿ:9-2-17ರ ತೀರ್ಪಿನ ಅನ್ವಯ ದಿ:06-05-2017ಕ್ಕೆ ಇರುವಂತೆ ಪತ್ರಾಂಕಿತ ವ್ಯವಸ್ಥಾಪಕ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಪತ್ರದ ಸಂಖ್ಯೆ: ತೋ‍ಇ:ಆ:ಸಿ:ಪಿ1:22:2017-18(ಭಾಗ), ದಿನಾಂಕ: 24-6-2017 ಹಾಗೂ 10-7-2017

2. ಸರ್ಕಾರದ ಪತ್ರ ಸಂ: ತೋ‍ಇ 136 ತೋಸೇಪ 2017(ಭಾಗ) ದಿ:29-7-2017

******

ಉಲ್ಲೇಖ (1) ರಲ್ಲಿ ಮಾನ್ಯ ಸರ್ವೋಚ್ಚನ್ಯಾಯಾಲಯದ ದಿ:9-2-17ರ ತೀರ್ಪಿನ ಆಧಾರದ ಮೇಲೆ ಸರ್ಕಾರದ ಆದೇಶ ಸಂ: ಸಿಆಸುಇ 182 ಸೇಹಿನಿ 2011 ದಿ:6-5-2017ರನ್ವಯ ನೀಡಿದ ಮಾರ್ಗಸೂಚಿಗಳನ್ನು ಅನುಸರಿಸಿ ಗ್ರೂಪ್ ಬಿ,ಸಿ, ಡಿ (ತಾಂತ್ರಿಕ ವೃಂದದ) ಹಾಗೂ ಲಿಪಿಕ ವೃಂದಗಳ ಮಾದರಿ ಜೇಷ್ಠತಾ ಪಟ್ಟಿಗಳನ್ನು ತಯಾರಿಸಿ ಸದರಿ ಪಟ್ಟಿಗಳು ಕ್ರಮಬದ್ಧವಾಗಿರುವ ಬಗ್ಗೆ ಸಿ.ಆ.ಸು.ಇ(ಸೇವಾ ನಿಯಮಗಳು) ಇವರ ಅಭಿಪ್ರಾಯ ಪಡೆದು ಮುಂದಿನ ಕ್ರಮದ ಬಗ್ಗೆ ಮಾರ್ಗದರ್ಶನ ನೀಡಲು ಸರ್ಕಾರವನ್ನು ಕೋರಲಾಗಿತ್ತು.

ಈ ಸಂಬಂಧ ಸರ್ಕಾರವು ಪರಿಶೀಲಿಸಿ ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಗ್ರೂಪ್ ಬಿ,ಸಿ, ಡಿ ಹಾಗೂ ಲಿಪಿಕ ವೃಂದಗಳಿಗೆ ಇಲಾಖಾ ಮುಖ್ಯಸ್ಥರೇ ಸಕ್ಷಮ ಪ್ರಾಧಿಕಾರವಾದ ಕಾರಣ ಮಾನ್ಯ ಸರ್ವೋಚ್ಚನ್ಯಾಯಾಲಯದ ತೀರ್ಪಿನ ದಿ:9-2-17 ಮತ್ತು ಸರ್ಕಾರದ ಆದೇಶ ಸಂ: ಸಿಆಸುಇ 182 ಸೇಹಿನಿ 2011 ದಿ:6-5-2017ರಲ್ಲಿ ನೀಡಿದ ನಿರ್ದೇಶನದಂತೆ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ನಿಯಮಾನುಸಾರ ಅಗತ್ಯಕ್ರಮ ವಹಿಸುವಂತೆ ನಿರ್ದೇಶಿಸಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ನಿರ್ದೇಶಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ದಿನಾಂಕ:09-02-2017ರ ಆಧಾರದ ಮೇಲೆ ಸರ್ಕಾರವು ದಿನಾಂಕ:06-05-2017 ರಲ್ಲಿ ಈ ಬಗ್ಗೆ ನೀಡಿದ ಮಾರ್ಗಸೂಚಿಗಳನ್ನು ಅನುಸರಿಸಿ, ದಿ:6-5-2017ಕ್ಕೆ ಇರುವಂತೆ ಪತ್ರಾಂಕಿತ ವ್ಯವಸ್ಥಾಪಕ ವೃಂದದ ತಾತ್ಕಾಲಿಕ ಜೇಷ್ಠತಾಪಟ್ಟಿಯನ್ನು ಲಗತ್ತಿಸಿದ, ಅನುಬಂಧ-I ರಲ್ಲಿ ಇರುವಂತೆ ಆಕ್ಷೇಪಣೆ ಆಹ್ವಾನಿಸಿ ಈ ಮೂಲಕ ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಇಲಾಖೆಯ ಸಂಬಂಧಿಸಿದ ಯಾವುದೇ

2...

ಅಧಿಕಾರಿ/ನೌಕರರಿಂದ ಆಕ್ಷೇಪಣೆ ಇದ್ದಲ್ಲಿ 15 ದಿನಗಳ ಒಳಗಾಗಿ ಆಕ್ಷೇಪಣೆಗಳನ್ನು ಸಮರ್ಥನೀಯ ದಾಖಲೆಗಳೊಂದಿಗೆ ಮೇಲಾಧಿಕಾರಿಗಳ ಮೂಲಕ ಸಲ್ಲಿಸತಕ್ಕದ್ದು. ನಿಗಧಿತ ಅವಧಿ ಮೀರಿದ/ದಾಖಲೆ ರಹಿತ ಆಕ್ಷೇಪಣೆಗಳನ್ನು ಪರಿಗಣಿಸದೇ ತಿರಸ್ಕರಿಸಲಾಗುವುದು.

ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಇಲಾಖಾ ವೆಬ್ ಸೈಟ್http://www.horticulture.kar.nic.in ನಲ್ಲಿ ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಜೇಷ್ಠತಾಪಟ್ಟಿಗಳ ಪ್ರತಿಗಳನ್ನು ವೆಬ್ ಸೈಟ್ ನಿಂದ ಪಡೆದು ತಮ್ಮ ಕಛೇರಿಯ ನೋಟೀಸ್ ಬೋರ್ಡ್ ನಲ್ಲಿ ಪ್ರಕಟಿಸುವುದು ಹಾಗೂ ಸಂಬಂಧಿಸಿದ ಎಲ್ಲಾ ಅಧಿಕಾರಿ/ನೌಕರರ ಗಮನಕ್ಕೆ ತರುವುದು. ನಿಗಧಿತ ಅವಧಿಯಲ್ಲಿ ಸ್ವೀಕೃತವಾದ ಆಕ್ಷೇಪಣೆಗಳನ್ನು ಆಯುಕ್ತರ ಕಚೇರಿಗೆ ಕಳುಹಿಸುವುದು.

ಮುಂದುವರೆದು, ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಆಯುಕ್ತರ ಕಛೇರಿ ವತಿಯಿಂದ ರವಾನಿಸುವ ಬಗ್ಗೆ ಯಾವುದೇ ಪ್ರತ್ಯೇಕ ಕ್ರಮವಹಿಸಿರುವುದಿಲ್ಲ. ಕಾರಣ ವೆಬ್ ಸೈಟ್ ಮೂಲಕವೇ ಪ್ರತಿ ಪಡೆದು ಕ್ರಮವಹಿಸಲು ತಿಳಿಸಲಾಗಿದೆ.

ಆಯುಕ್ತರು

**ಪ್ರತಿಗಳು:**

1. ಕಛೇರಿ ಆದೇಶ ವಹಿಗೆ,
2. ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಎಲ್ಲಾ ತೋಟಗಾರಿಕೆ ಅಪರ ನಿರ್ದೇಶಕರು
4. ಎಲ್ಲಾ ತೋಟಗಾರಿಕೆ ಜಂಟಿ ನಿರ್ದೇಶಕರು,
5. ಎಲ್ಲಾ ತೋಟಗಾರಿಕೆ ಉಪ ನಿರ್ದೇಶಕರು(ಜಿಪ)
6. ಎಲ್ಲಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾವ)/(ಜಿಪ)
7. ಎಲ್ಲಾ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಗಳಿಗೆ
8. ಕಛೇರಿ ಪ್ರತಿ

ಅನುಬಂಧ

## ದಿನಾಂಕ:06.05.2017ಕ್ಕೆ ಇರುವಂತೆ ಗ್ರೂಪ್ ಬಿ ಪತ್ರಾಂಕಿತ ವ್ಯವಸ್ಥಾಪಕರ ವೃಂದದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ

| ಕ್ರ. ಸಂ | ಹೆಸರು (ಶ್ರೀಮತಿ/ಶ್ರೀಯುತರಾದ) | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಾಸ್ತವವಾಗಿ ಬಡ್ತಿ ಹೊಂದಿದ ದಿನಾಂಕ | ಪ್ರಸ್ತುತ ಬಡ್ತಿಗೆ ನಿಗಧಿಪಡಿಸಿದ ಅರ್ಹತಾ ದಿನಾಂಕ (As per review) | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ಆರ್.ಎಸ್.ಚವ್ಹಾಣ್(SC)* | 24-08-1950 | 15-04-1977 | 27-05-1999 | 19-10-1999 | ಬಡ್ತಿ |
| 2. | ಯು.ಐ.ನಾಯಕ್ (SC)* | 01-06-1953 | 15-04-1977 | 30-03-2010 | 30-03-2010 | ನಿವೃತ್ತಿ |
| 3. | ಪಿ.ಆರ್. ರಮೇಶ್ | 13-08-1955 | 31-10-1981 | 10-07-2013 | 10-07-2013 | ನಿವೃತ್ತಿ |
| 4. | ಎನ್.ಪಿ.ಕಾಂಬ್ಳೆ | 01-12-1955 | 31-10-1981 | 15-06-2015 | 15-06-2015 | ನಿವೃತ್ತಿ |
| 5. | ಟಿ.ಎನ್.ನಾರಾಯಣ (SC)* | 02-03-1955 | 31-10-1981 | 22-09-2011 | RBE | - |
| 6. | ಎಸ್.ಸಂಜೀವಯ್ಯ (SC)* | 01-06-1956 | 31-10-1981 | 10-07-2013 | RBE | ಸ್ವಯಂ ನಿವೃತ್ತಿ |
| 7. | ಎನ್.ಜಿ. ಶಶಿಕುಮಾರ್ | 10-05-1962 | 16-07-1985 | 15-06-2015 | 15-06-2015 | |
| 8. | ಗುಜ್ಜಲ ರಾಮಣ್ಣ(ST)* | 25-06-1960 | 16-07-1985 | 27-05-1999 | 26-12-2015 | ಬಡ್ತಿ |
| 9. | ನಾಗರಾಜ್ (ST) * | 09-08-1957 | 16-07-1985 | 26-12-2015 | 12-05-2016 | |

*ಸರ್ಕಾರಿ ಅಧಿಸೂಚನೆ ಸಂಖ್ಯೆ:ಸಿಆಸುಇ 182 ಸೇಹಿಮ 2011 ದಿ:06.05.17ರನ್ವಯ ಈ ಹಿಂದೆ ಮೀಸಲಾತಿ ಆಧಾರದ ಮೇಲೆ ನೀಡಿದ ಬಡ್ತಿಯನ್ನು ಪೋಷಕ ವೃಂದದ ಜ್ಯೇಷ್ಠತಾನುಸಾರ ಪುನರ್ ಅವಲೋಕಿಸಿ ಪರಿಷ್ಕೃತ ಅರ್ಹತಾದಿನಾಂಕವನ್ನು ನಿಯಮಾನುಸಾರ ನಿಗಧಿಪಡಿಸಿದೆ.

**Review ನಂತರ ಮುಂಬಡ್ತಿಗೆ ಅರ್ಹತಾ ದಿನಾಂಕ ಲಭ್ಯವಾಗದ ನೌಕರರ ವಿವರ**

| | | | | | | |
|---|---|---|---|---|---|---|
| 10. | ಪಿ.ದೇವಕಿ (SC) | 01-06-1964 | 16-09-1988 | 12-05-2016 | - | ಸೇವೆಯಲ್ಲಿದ್ದಾರೆ |

ಅಧ್ಯಕ್ಷರು.